

# ಕ್ಯೂಬ್ ಹೌಸ್ ಮ್ಯಾಜಿಕ್!

ಮನೆ ವಿನ್ಯಾಸಗಳಲ್ಲಿ ಅದೆಷ್ಟು ಬಗೆ? ಎಷ್ಟೊಂದು ವೈವಿಧ್ಯ? ನೋಡಲು ಆಕರ್ಷಕವಾಗಿರುವ ಇಂತಹ ಮನೆಗಳು ವಾಸಕ್ಕೂ ಖುಷಿಕೊಡುತ್ತವೆ. ಚಿತ್ರದಲ್ಲಿರುವ ಮನೆಗಳನ್ನು ನೋಡಿ. ಇವು ನಿರ್ಮಾಣಗೊಂಡದ್ದು ನೆದರ್‌ಲ್ಯಾಂಡ್‌ನ ರೋಟರ್ಡ್ಯಾಂ ನಗರದಲ್ಲಿ.

ಆಧುನಿಕ ವಾಸ್ತುಶೈಲಿಯ ಈ ಮನೆಗಳು ನೆದರ್‌ಲ್ಯಾಂಡ್‌ನ ಎರಡನೆ ಅತಿ ದೊಡ್ಡ ನಗರದಲ್ಲಿದೆ. ಎರಡನೆ ಪ್ರಪಂಚ ಯುದ್ಧಧಲ್ಲಿ ಜರ್ಮನಿಯ ವಾಯುದಾಳಿಯಿಂದ ಸಂಪೂರ್ಣ ನಾಶಗೊಂಡು ಕ್ರಮೇಣ ಮರುನಿರ್ಮಾಣಗೊಂಡ ಈ ನಗರದಲ್ಲಿ ತಲೆ ಎತ್ತಿ ನಿಂತದ್ದು ಆಧುನಿಕ ಶೈಲಿಯ ಮನೆಗಳು. ‘ಕ್ಯೂಬ್ ಹೌಸ್’ ಎಂದು ಕರೆಯಲಾಗುವ ಈ ಮನೆಗಳು ಮೇಲ್ನೋಟಕ್ಕೆ ಮ್ಯಾಜಿಕ್ ಹೌಸ್‌ನಂತಿವೆ. ಅಲ್ಲದೆ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ ಇಂಥ ಮನೆಗಳು.

ಡಚ್ ವಾಸ್ತುಶಿಲ್ಪಿ ಪಿಯೆಟ್ ಬ್ಲಾಮ್ ಎಂಬಾತ ವಿನ್ಯಾಸಗೊಳಿಸಿದರು. ಈ ‘ಘನಾಕೃತಿಯ ಮನೆ’ಗಳ ಸಮುಚ್ಛಯ. ಕಡಿಮೆ ಜಾಗದಲ್ಲಿ ಹೆಚ್ಚು ಮನೆಗಳನ್ನು ನಿರ್ಮಿಸುವ ಮುಖ್ಯ ಉದ್ದೇಶದಿಂದಲೇ ಇದನ್ನು ನಿರ್ಮಿಸಲಾಗಿದೆ. ಸಾಂಪ್ರದಾಯಿಕ ಮನೆಗಳಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಈ ಮನೆಗಳ ನಿರ್ಮಾಣ ವೀಕ್ಷಕರಲ್ಲಿ ಅಚ್ಚರಿಮೂಡಿಸುತ್ತದೆ. ಸಾಂಪ್ರದಾಯಿಕ ಮನೆಗಳನ್ನು 45 ಡಿಗ್ರಿಗಳ ಘನರೂಪದ ಮನೆಗಳನ್ನಾಗಿ ನಿರ್ಮಿಸಿ ಷಡ್ಭುಜಾಕೃತಿಯು ದ್ವಾರದ ಮೇಲೆ ಇರುವಂತೆ ನಿರ್ಮಿಸಲಾಗಿದೆ. ಮೂರು ಮಹಡಿಗಳನ್ನು ಹೊಂದಿರುವ ಮನೆಗಳ ನೆಲ ಅಂತಸ್ತಿನಲ್ಲಿ ಪ್ರವೇಶದ್ವಾರ, ಎರಡನೆ ಅಂತಸ್ತಿನಲ್ಲಿ ದೊಡ್ಡದಾದ ಹಾಲ್ ಹಾಗೂ ತೆರೆದ ಅಡುಗೆ ಮನೆಯನ್ನು ಹೊಂದಿದ್ದು, ಮೂರನೆ ಮಹಡಿ ಎರಡು ಮಲಗುವ ಕೋಣೆಗಳು ಹಾಗೂ ಸ್ನಾನಗೃಹವನ್ನು ಹೊಂದಿದೆ. ಒಂದೊಂದು ಮನೆಯೂ 1,100 ಚದರ ಅಡಿ ವಿಸ್ತೀರ್ಣವುಳ್ಳದ್ದಾಗಿದೆ. 1977 ನೇ ಇಸವಿಯಲ್ಲಿ ಒಟ್ಟು 38 ಸಣ್ಣ ಹಾಗೂ 2 ದೊಡ್ಡ 'ಕ್ಯೂಬ್ ಹೌಸ್'ಗಳನ್ನು ನಿರ್ಮಿಸಲಾಯಿತು. ಎಲ್ಲಾ ಮನೆಗಳೂ ಒಂದಕ್ಕೊಂದು ಹೊಂದಿಕೊಂಡಿವೆ.

ವಿಶಿಷ್ಟ ವಿನ್ಯಾಸವುಳ್ಳ ಮನೆಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರಿಂದ



ಮನೆಗಳಲ್ಲಿ ವಾಸಿಸುವವರಿಗೆ ಆಗುವ ಕಿರಿಕಿರಿಯನ್ನು ತಪ್ಪಿಸಲು ಒಂದು ಮನೆಯನ್ನು ಮಾತ್ರ ವೀಕ್ಷಣೆಗೆಂದೇ ಮೀಸಲಿಡಲಾಗಿದೆ. 'ಶೋ ಕ್ಯೂಬ್' ಮನೆಯಲ್ಲಿ ವೀಕ್ಷಕರು ಸಂಚರಿಸಿ, ಕಟ್ಟಡಗಳ ವಿನ್ಯಾಸ, ಇತಿಹಾಸಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು. ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ ವಾರದ ಏಳೂ ದಿನಗಳು ವೀಕ್ಷಣೆಗಾಗಿ ತೆರೆದಿರುತ್ತದೆ. ಪ್ರವೇಶ ದರ 3 ಯೂರೋಗಳು.

■ ಜಿ. ನಾಗೇಂದ್ರ ಕಾವೂರು